## ಮಾನ್ಯ ಕರ್ನಾಟಕ ತಿಗಳ ಸಮುದಾಯದ ( ಅಗ್ನಿ, ವಹ್ನಿ, ಶಂಭು) ಕುಲ ಭಾಂದವರೇ

### ಮೈಸೂರಿನ ತಿಗಳ ಸಮುದಾಯದ ಕುಲ ಬಾಂಧವರಿಂದ ತಮಗೆ ಹಾರ್ಧಿಕ ಶುಭಾಶಯಗಳು

ಮಾನ್ಯರೇ,

ಕರ್ನಾಟಕದ ಮೊದಲ ರಾಜಧಾನಿನಗರ, ಅರಮನೆಗಳ ಭವ್ಯ ಪರಂಪರೆ ಇರುವ ಪ್ರಸ್ತುತ ಕರ್ನಾಟಕ ರಾಜ್ಯದ 2ನೇ ಸ್ಥಾನದಲ್ಲಿರುವ ಮೈಸೂರು ನಗರದಲ್ಲಿ ನಮ್ಮ ತಿಗಳ ಸಮುದಾಯವು ಬೆರಳೆಣಿಕೆಯಷ್ಟಿದ್ದು (ಅಗ್ನಿ, ವಹ್ನಿ, ಶಂಭು) ಬರೀ 35 ಕುಟುಂಬಗಳು ಮಾತ್ರ ರಾಜ್ಯದ ವಿವಿದೆಡೆಯಿಂದ ಬಂದು ವಾಸಿಸುತ್ತಿದ್ದು ಮೈಸೂರು ಸುತ್ತಮುತ್ತಲ ಗ್ರಾಮಗಳಾದ ಪಾಲಹಳ್ಳಿ, ಹುಣಸೂರು ತಾಲ್ಲೂಕು, ಹರವೆ, ಮುದ್ದನಹಳ್ಳಿ, ಪಿರಿಯಾಪಟ್ಟಣ ತಾಲ್ಲೂಕು, ಪಂಚವಳ್ಳಿ, ಕೆ.ಆರ್ ಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು, ಹೊಸಹೊಳಲು, ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಗಂಜಾಂನ ಕೆಲವು ಗ್ರಾಮಗಳಲ್ಲಿ ನಮ್ಮ ಸಮುದಾಯದ ಜನರು ವಾಸಿಸುತ್ತಿದ್ದಾರೆ.

ಈ ಸಮುದಾಯವು ಈ ಭಾಗಗಳಲ್ಲಿ ತುಂಬಾ ವಿರಳವಾಗಿದ್ದು ಹಾಗೂ ತುಂಬಾ ಬಡ ಕುಟುಂಬಗಳಾಗಿರುತ್ತವೆ. ಈ ಭಾಗದ ತಿಗಳ ಸಮುದಾಯದ ಕ್ಷೇಮಾಭಿವೃದ್ದಿ ಮತ್ತು ಈ ಸಮುದಾಯಕ್ಕೆ ತಾಂತ್ರಿಕ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಮನಗಂಡು ಮೈಸೂರಿನಲ್ಲಿ ವಾಸಿಸುತ್ತಿರುವ ಸಮುದಾಯದ 30 ಕುಟುಂಬಗಳು ಒಂದುಗೂಡಿ ಅದರಲ್ಲಿ ಮುಖ್ಯವಾಗಿ ನಮ್ಮ ಜನಾಂಗದ ಹಾಗೂ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಆರೋಗ್ಯಧಿಕಾರಿಯಾಗಿ ಕಾರ್ಯ ನಿರ್ವಹಿಸಿ ಈ ಸುತ್ತಮುತ್ತಲಿನ ಕುಲ ಬಾಂಧವರ ಕಷ್ಟ ಸುಖಗಳನ್ನು ತುಂಬಾ ಹತ್ತಿರದಿಂದ ಕಂಡಂತಹ ಡಾ. ಜಿ ರಾಮಯ್ಯನವರ ಮಾರ್ಗದರ್ಶನದಲ್ಲಿ **2000**ನೇ ಇಸವಿಯಲ್ಲಿ ಮೈಸೂರಿನಲ್ಲಿ ಅಖಿಲ ಕರ್ನಾಟಕ ತಿಗಳರ ಕ್ಷೇಮಾಭಿವೃದ್ದಿ ಮತ್ತು ಸಾರ್ವಜನಿಕ ವಿದ್ಯಾಭಿವೃದ್ದಿ ಸಂಘವನ್ನು ಕಟ್ಟಿ ಇತರೆ ಸಮುದಾಯದ ದಾನಿಗಳಿಂದ ಧನ ಸಹಾಯ ಪಡೆದು ಹಾಗೂ ಕುಲಬಾಂಧವರ ತನುಮನಧನಗಳ ಸಹಕಾರದಿಂದ ಈ ಸಂಘವನ್ನು ಕಟ್ಟಿ ಈ ಸಂಘದವತಿಯಿಂದ **ಶ್ರೀ ಅರುಣೋದಯ ಕೈಗಾರಿಕಾ ತರಬೇತಿ ಸಂಸ್ಥೆಯನ್ನು 2001** ರಲ್ಲಿ ಪ್ರಾರಂಭಿಸಿ ಸಮುದಾಯದ ಹಲವು ಮಕ್ಕಳಿಗೆ, ಹಾಗೂ ಸಾಮಾಜಿಕವಾಗಿ ಹಿಂದುಳಿದ ಇತರೇ ಸಮುದಾಯದ ಮಕ್ಕಳಿಗೆ ತಾಂತ್ರಿಕ ತರಬೇತಿ ನೀಡುತ್ತಾ ಬಂದಿದ್ದು **2006** ರಲ್ಲಿ ನಮ್ಮ ಸಮುದಾಯದ ಕೆಲವು ಮುಖಂಡರು ಮತ್ತು ಇತರೇ ಸಮುದಾಯದ ಕೆಲವು ರಾಜಕೀಯ ಮುಖಂಡರ ನೆರವಿನಿಂದ ಮೈಸೂರು ನಗರಾಭಿವೃದ್ದಿ ಪ್ರಾಧಿಕಾರದಿಂದ ಸಿ ಎ ನಿವೇಶನವನ್ನು ಪಡೆದು ಸ್ವಂತ ಕಟ್ಟಡವನ್ನು ನಿರ್ಮಿಸಿ ಈ ಕಟ್ಟಡದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿರುವುದು ಈ ಜನಾಂಗಕ್ಕೆ ಶ್ಲಾಘನೀಯ ವಿಷಯವಾಗಿದೆ.

ಈ ಸಂಸ್ಥೆಯು ಕರ್ನಾಟಕ ತಿಗಳ ಸಮುದಾಯದ ಆಸ್ತಿಯಾಗಿದ್ದು ಈ ಸಂಸ್ಥೆಯನ್ನು ಸಮುದಾಯದ ಏಳಿಗೆಯ ದೃಷ್ಟಿಯಿಂದ ಅಭಿವೃದ್ದಿಪಡಿಸುವ ಅಗತ್ಯವಿದ್ದು ಇದಕ್ಕೆ ಇಡೀ ಕರ್ನಾಟಕ ತಿಗಳ ಸಮುದಾಯದ ( ಅಗ್ನಿ, ವಹ್ನಿ, ಶಂಭು) ಸಹಕಾರ ಅಗತ್ಯವಿದ್ದು ತಾವೆಲ್ಲಾ ನಮ್ಮ ಜನಾಂಗದ ಅಭಿವೃದ್ದಿಗಾಗಿ ತಮ್ಮ ಒಂದು ದಿನದ ದುಡಿಮೆಯನ್ನು ಈ ಸಂಘಕ್ಕೆ ನೀಡಿದಲ್ಲಿ ಸಾಂಸ್ಕೃತಿಕ ನಗರವಾದ ಮೈಸೂರಿನಲ್ಲಿ ಇನ್ನೂ ಹಲವು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳಸುವಲ್ಲಿ ಇದು ಅವಶ್ಯವಿರುತ್ತದೆ.

ಮಾನ್ಯ ಕುಲಬಾಂದವರೇ ತಾವು ಕೇವಲ ತಮ್ಮ ಒಂದು ದಿನದ ದುಡಿಮೆಯ ಹಣಕ್ಕೆ ಈ ಸಂಸ್ಥೆಗೆ ತಾವು ಕೊಡುವ ಕೊಡುಗೆಯ ಪ್ರತೀ ರೂಪಾಯಿಗಳನ್ನು ಅತೀ ಪಾರದರ್ಶಕವಾಗಿ ಬಳಸಿ ನಿಮ್ಮ ಶ್ರಮದ ಕೊಡುಗೆಯು ಈ ಸಮುದಾಯದಲ್ಲಿ ಹಿಂದುಳಿದಿರುವ ಕುಟುಂಬಗಳನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮೇಲೆತ್ತುವ ಪ್ರಯತ್ನ ಮಾಡುತ್ತೇವೆಂದು ತಮಗೆ ಭರವಸೆಯನ್ನು ನೀಡುತ್ತಿದ್ದು ಈಗ ಮೈಸೂರಿನಲ್ಲಿ ನಮ್ಮ ಮುಂದಿನ ಯೋಜನೆಗಳಾದ ಈಗಿರುವ ಖಾಲಿ ನಿವೇಶನದಲ್ಲಿ ಜನಾಂಗಕ್ಕಾಗಿ

Scanned with CamScanner

1) ಸುಸರ್ಜಿತ ಸಮುದಾಯದ ಭವನವನ್ನು ನಿರ್ಮಿಸುವುದು.

2) ಸಮುದಾಯದ ಮಕ್ಕಳಿಗೆ ಹಾಗೂ ಜನಾಂಗದ ಎಲ್ಲರಿಗೂ ಮೈಸೂರಿನಲ್ಲಿ ಬಂದು ಉಳಿದುಕೊಳ್ಳಲು ಹಾಗೂ ವಿಧ್ಯಾರ್ಥಿ ನಿಲಯ ಮತ್ತು ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸುವುದು

3) ಈಗಿರುವ ಕೈಗಾರಿಕಾ ತರಬೇತಿ ಸಂಸ್ಥೆಯೊಂದಿಗೆ ತಾಂತ್ರಿಕ ತರಬೇತಿ ಶಿಕ್ಷಣ ಸಂಸ್ಥೆ ಪಾಲಿಟೆಕ್ನಿಕ್ ಪ್ರಾರಂಭಿಸಲು ಯೋಜನೆಗಳನ್ನು ರೂಪಿಸಿದ್ದು ಇದು ಈ ಸಮುದಾಯವು ಇತರೇ ಸಮುದಾಯಗಳೊಟ್ಟಿಗೆ ನಮ್ಮ ಸ್ವಂತ ಅಭಿವೃದ್ಧಿಯಿಂದ ಗುರುತಿಸಿ ಕೊಳ್ಳುವುದು ಅವಶ್ಯವಾಗಿರುತ್ತದೆ.

ಮಾನ್ಯರೇ, ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿರುವುದೇನೆಂದರೆ ಮೈಸೂರಿನಲ್ಲಿರುವ ಈ ಸಂಘವು ಇಡೀ ಕರ್ನಾಟಕ ತಿಗಳ ಸಮುದಾಯದ ಆಸ್ತಿ ಎಂಬುದನ್ನು ತಾವು ತಿಳಿಯಬೇಕು ಈ ಸಂಘವನ್ನು ಇಡೀ ಕರ್ನಾಟಕ ತಿಗಳ ಸಮುದಾಯದ ಆಸ್ತಿ ಎಂದು ನೋಂದಣಿ ಮಾಡಿಸಿರುತ್ತೇವೆ. ಈ ಸಂಘವು 2000 ಇಸವಿಯಿಂದ ಪ್ರಾರಂಭವಾಗಿ 14 ವರ್ಷಗಳಲ್ಲಿ ಒಂದು ಸಿ ಎ ನಿವೇಶನ ಪಡೆದು ಸ್ವಂತ ಕಟ್ಟಡ ನಿರ್ಮಿಸಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ನಡೆಸಿ ಕೊಂಡು ಬಂದಿರುವುದು ಇಲ್ಲಿಯ ಸಮುದಾಯದ ಸದಸ್ಯರುಗಳು ಕಾಯಾ ವಾಚಾ ಮನಸಾ ಪರಿಶುದ್ದರಾಗಿ ಕೆಲಸ ಮಾಡಿರುವುದರಿಂದ ಇದು ಸಾಧ್ಯವಾಗಿದೆ ತಾವುಗಳು ದಯಮಾಡಿ ತಮ್ಮೆಲ್ಲರ ಸಹಕಾರ ನೀಡಿ ಹನಿ–ಹನಿ ಗೂಡಿದರೆ ಹಳ್ಳವೆಂಬ ನಾಣ್ನುಡಿಯನ್ನು ಆದರ್ಶವಾಗಿಟ್ಟುಕೊಂಡು ಈ ಸಂಸ್ಥೆಯನ್ನು ಮೇಲೆ ತಿಳಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಪ್ರಯತ್ನಕ್ಕೆ ಕೈಹಾಕಿದ್ದು ನಿಮ್ಮ ಕೊಡುಗೆಯ ಹಣದ ಬಳಕೆ ಹಾಗೂ ಈ ಸಂಘದ ಚಟುವಟಿಕೆಗಳು ಹಾಗೂ ವರ್ಷದ ಕೊನೆಯ ಆಯವ್ಯಯ ಪತ್ರಗಳನ್ನು ಇದೇ ವೆಬ್‌ಸೈಟಿನಲ್ಲಿ ಕಾಲಕಾಲಕ್ಕೆ ಪ್ರಕಟಿಸಲಿದ್ದೇವೆ.

ಈ ಸಂಸ್ಥೆಯು ಪ್ರಮುಖವಾಗಿ ಎರಡು ಮಹಾಕಾರ್ಯಗಳನ್ನು ಕೈಗೊಳ್ಳುತ್ತಿದ್ದು

1) ನಮ್ಮ ಸಮಸ್ತ ಕರ್ನಾಟಕ ತಿಗಳ ಸಮುದಾಯದ ಗಣತಿಯನ್ನು ಅಂತರ್ಜಾಲದ ಮುಖಾಂತರ ನೋಂದಣಿ ಮಾಡುವ ಕೆಲಸಕ್ಕೆ ಕೈ ಹಾಕಿದ್ದು ಇದಕ್ಕೆ ಸಂಬಂದಿಸಿದಂತೆ ಜನಾಂಗದ ಎಲ್ಲಾ ವಿವರಗಳನ್ನು ಒಳಗೊಂಡ ಪುಸ್ತಕಗಳನ್ನು ಹೊರತರಲು ಉದ್ದೇಶಿಸಿದೆ.
2) ಈ ಸಂಸ್ಥೆಯನ್ನು ಉನ್ನತೀಕರಿಸಲು ನಮ್ಮ ಸಮಸ್ತ ತಿಗಳ ಸಮುದಾಯದ ಕೊಡುಗೆಯನ್ನು ಅವರವರ ಶಕ್ತಾನುಸಾರ ನೀಡಲು ಮನವಿ ಮಾಡುವುದು ಮತ್ತು ರೂ 5000/– ಅದಕ್ಕಿಂತ ಹೆಚ್ಚು ಕೊಡುಗೆಯನ್ನು ಕೊಡುವಂತಹ ದಾನಿಗಳ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.

ತಾವು ನೀಡುವ ಕೊಡುಗೆ ಹಾಗೂ ತಮ್ಮ ವಿವರವನ್ನು ತಾವು ಅಂತರ್ಜಾಲದಲ್ಲಿ ನಮೂದಿಸಿದ ತಕ್ಷಣ ತಮಗೆ ಇಮೇಲ್ ಅಥವಾ ಪೋಸ್ಟ್ ಮುಖಾಂತರ ರಶೀದಿಗಳನ್ನು ಕಳುಹಿಸಿ ಕೊಡಲಾಗುವುದು. ಹಾಗೂ ಪ್ರತೀ ಆರು ತಿಂಗಳಿಗೊಮ್ಮೆ ಎಲ್ಲಾ ದಾನಿಗಳ ಹೆಸರುಗಳನ್ನು ಸಂಸ್ಥೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು. ತಾವು ಈ ಸಂಘಕ್ಕೆ ದೇಣಿಗೆ ನೀಡುವವರು ಈ ಕೆಳಗಿನ ಅನುಕೂಲತೆಯನ್ನು ಬಳಸಿಕೊಳ್ಳಬಹುದು.

1) Internet Banking ಮುಖಾಂತರ ಹಣ ವರ್ಗಾವಣೆ ಮಾಡಬಹುದು.
2) ಯಾವುದೇ ಬ್ಯಾಂಕ್ ಖಾತೆ ಇರುವವರು ತಮ್ಮ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆ ಮಾಡಬಹುದು
3) ಯಾವುದೇ ಬ್ಯಾಂಕ್ ಖಾತೆ ಹೊಂದಿಲ್ಲದ ದಾನಿಗಳು ವಿಜಯಾ ಬ್ಯಾಂಕ್ ಯಾವುದೇ ಶಾಖೆಗಳಿಂದ ಸಂಘದ ಖಾತೆಗೆ ನೇರವಾಗಿ ಹಣ ಸಂದಾಯ ಮಾಡಬಹುದು.

ಮಾನ್ಯ ಕುಲಬಾಂದವರೇ ಬನ್ನಿ ನಾವೆಲ್ಲಾ ಒಂದಾಗಿ ಸೇರೋಣ ನಮ್ಮ ಕೈಲಾದ ಅಲ್ಪ ಕಾಣಿಕೆಯಿಂದ ನಮ್ಮ ಸಮುದಾಯದ ಅಣ್ಣ–ತಮ್ಮಂದಿರ ಅಕ್ಕ–ತಂಗಿಯರ ಏಳಿಗೆಗಾಗಿ ಕೈಜೋಡಿಸೋಣ ಮನಸ್ಸಿದ್ದಲ್ಲಿ ಮಾರ್ಗವೆಂಬ ಹಿತನುಡಿಯನ್ನು ಸಹಕಾರಗೊಳಿಸೋಣ.

Scanned with CamScanner

| | |
|---|---|
| **A/c Name** | **AKHILA KARNATAKA THIGALARA KSHEMABHIRUDDI MATHU SARVAJANIKA VIDYABRUDDI SANGHA** |
| **A/c Number** | **74400100002690** |
| **Name of The Bank** | **Bank of Baroda** |
| **Name of the Branch** | **Vijayanagara 1st Stage, Mysuru** |
| **IFSC Code** | **BARB0VJVIMY (Fifth Character is zero)** |

Scanned with CamScanner